ನಾಣ್ಯಗಳೇ! ಎಷ್ಟೆಂದರೆ, ಅದರಿಂದ ಅವನು ಇಡೀ ಕೋಪನ್ ಹೇಗನ್ ನಗರವನ್ನೆ ಕೊಂಡು ಕೊಳ್ಳಬಹುದು; ಅಷ್ಟೊಂದಿದ್ದವು. ಅವನಿಗೆ ಬೇಕಾದ ಸಕಲ ಭೋಗವಸ್ತುಗಳನ್ನೂ ಅವನು ಕೊಂಡುಕೊಳ್ಳಬಹುದಿತ್ತು. ಸೈನಿಕ ತಾನಾಗಲೇ ಹಿಂದಿನ ತಿಜೋರಿಯಿಂದ ಸಂಗ್ರಹಿಸಿದ ಎಲ್ಲಾ ಬೆಳ್ಳಿಯ ನಾಣ್ಯಗಳನ್ನು ಕಿತ್ತು ಎಸೆದು ತನ್ನ ಎಲ್ಲಾ ಕಿಸೆಗಳನ್ನು ಖಾಲಿ ಮಾಡಿದ. ತನ್ನ ಬೆನ್ನ ಹಿಂದೆ ಇದ್ದ ಚೀಲವನ್ನೂ ಸಹ ಖಾಲಿ ಮಾಡಿದ. ತನ್ನ ತಲೆಯ ಮೇಲಿದ್ದ ಹ್ಯಾಟು, ಕಾಲಿನ ಚೀಲ, ಎಲ್ಲವನ್ನೂ ಬೆಳ್ಳಿಯ ನಾಣ್ಯಗಳಿಂದ ತುಂಬಿದ್ದನ್ನು ಖಾಲಿ ಮಾಡಿದ. ಅದರ ಬದಲಾಗಿ ಅವುಗಳ ಜಾಗದಲ್ಲಿ ಈಗ ಲಭ್ಯವಾದ ಬಂಗಾರದ ನಾಣ್ಯಗಳಿಂದ ಅವೆಲ್ಲವನ್ನೂ ತುಂಬಿದ. ಕೊನೆಗೆ ಅವನ ಬೂಟುಗಳನ್ನು ಸಹ ಬಂಗಾರದ ನಾಣ್ಯಗಳಿಂದ ತುಂಬಿದ. ಅವನಿಗೆ ನಡೆಯಲು ಸಾಧ್ಯವಾಗದಿದ್ದರೂ ನಾಣ್ಯಗಳಿಂದ ತುಂಬಿದ. ಎಲ್ಲೆಲ್ಲೂ ಜಾಗವಿಲ್ಲ ಎಂದಾದ ಮೇಲೆ ನಾಯಿಯನ್ನು ಎತ್ತಿ ಪುನಃ ತಿಜೋರಿಯಯ ಮೇಲೆ ಕುಳ್ಳಿರಿಸಿ, ಬಾಗಿಲನ್ನು ಮುಚ್ಚಿ ಮರದ ಪೊಟರೆಯ ಮೂಲಕ ಕೂಗಿ ಕೂಗಿ ಹೇಳಿದ: 'ಹೇ ಮುದುಕಿ ನನ್ನನ್ನು ಮೇಲಕ್ಕೆ ಎಳೆದುಕೋ' ಎಂದ. ಅದಕ್ಕೆ ಮುದುಕಿ 'ಆಗಲಿ ಆದರೆ, ನೀನು ಅಲ್ಲಿರುವ ಹಳೇ ಪೆಟ್ಟಿಗೆಯನ್ನು ತೆಗೆದುಕೊಂಡಿರುವೆಯಾ?' ಎಂದು ಕೇಳಿದಳು. ಅದಕ್ಕೆ ಸೈನಿಕ 'ಇಲ್ಲ ನಾನು ಅದನ್ನು ಮರೆತೇ ಬಿಟ್ಟಿದ್ದೆ. ತಡೆ ನಾನು ಅದನ್ನು ಹುಡುಕಿ ತೆಗೆದುಕೊಳ್ಳುತ್ತೇನೆ' ಎನ್ನುತ್ತಾನೆ. ಅಲ್ಲಿಯೇ ಇದ್ದ ಹಳೇ ಪೆಟ್ಟಿಗೆಯನ್ನು ಕೈಗೆತ್ತಿಕೊಂಡು ಸೈನಿಕ ಕೂಗಿ ಮುದುಕಿಗೆ ಹೇಳಿದ 'ನೀನು ಹೇಳಿದ ಪೆಟ್ಟಿಗೆ ತೆಗೆದುಕೊಂಡಿದ್ದೇನೆ, ನನ್ನನ್ನು ಮೇಲಕ್ಕೆ ಎತ್ತಿಕೋ' ಎನ್ನುತ್ತಾನೆ. ಮುದುಕಿ ಅವನನ್ನು ಮೆಲಕ್ಕೆ ಎಳೆಯುತ್ತಾಳೆ. ಸೈನಿಕ ತಾನು ಸಂಗ್ರಹಿಸಿದ್ದ ಬಂಗಾರದ ನಾಣ್ಯಗಳೊಡನೆ ಮತ್ತು ಹಳೆಯ ಪೆಟ್ಟಿಗೆಯ ಸಹಿತ ರಸ್ತೆಯ ಮೇಲೆ ನಿಂತಿದ್ದ.

ಸೈನಿಕ ಮುದುಕಿಯನ್ನು ಪ್ರಶ್ನಿಸಿದ– 'ನಿನಗೆ ಪೆಟ್ಟಿಗೆ ಏಕೆ ಬೇಕು? ಇದರಿಂದ ನಿನಗೇನು ಪ್ರಯೋಜನ?' ಅದಕ್ಕೆ ಮಾಯಾವಿ ಮುದುಕಿ ಹೇಳಿದಳು, 'ಅದು ನಿನಗೆ ಬೇಕಿಲ್ಲ. ನಿನಗೆ ನಿನ್ನ ಬಂಗಾರ ಸಿಕ್ಕಿದೆ, ನನಗೆ ನನ್ನ ಪೆಟ್ಟಿಗೆಯನ್ನು ಕೊಡು'. ಅದಕ್ಕೆ ಸೈನಿಕನೆಂದ 'ಹುಚ್ಚು ಮುದುಕಿ ನೀನು ಈ ಪೆಟ್ಟಿಗೆಯಿಂದ ನಿನಗಾಗುವ ಪ್ರಯೋಜನವನ್ನು ಹೇಳದೇ ಹೋದರೆ ನನ್ನ ಖಡ್ಗದಿಂದ ನಿನ್ನ ತಲೆಯನ್ನು ಕಡಿದು ಬಿಡುತ್ತೇನೆ'. 'ನಾನು ಹೇಳುವುದಿಲ್ಲ, ಕೊಡು ನನಗೆ ಪೆಟ್ಟಿಗೆಯನ್ನು'ಎಂದು ಮುದುಕಿ ಮಾಯಾವಿನಿ ಕಿರುಚಿದಳು. ಆಗ ಸೈನಿಕ ತನ್ನಲ್ಲಿ ಇದ್ದ ಖಡ್ಗದಿಂದ ಮುದುಕಿಯ ಶಿರವನ್ನು ಕತ್ತರಿಸಿಬಿಟ್ಟ. ಮುದುಕಿ ಶವವಾಗಿ ನೆಲದ ಮೇಲೆ ಬಿದ್ದಳು. ಸೈನಿಕ ಮಾಯಾವಿನಿ ಕೊಟ್ಟ ನಿಲುವಂಗಿಯಲ್ಲಿ ತನ್ನಲ್ಲಿ ಇದ್ದ ಚಿನ್ನದ ನಾಣ್ಯಗಳನ್ನೆಲ್ಲಾ ಸುರಿದು ಕಟ್ಟಿಕೊಂಡು ತನ್ನ ಹೆಗಲ ಮೇಲೆ ಹೇರಿಕೊಂಡ. ತನ್ನ ಕೈಯಲ್ಲಿ ಇದ್ದ ಪೆಟ್ಟಿಗೆಯನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡು ಶಹರಿನೆಡೆಗೆ ನಡೆದ.

ಶಹರಿಗೆ ಬಂದವನೆ, ಒಂದು ವಿಶ್ರಾಂತಿ ಗೃಹದಲ್ಲಿ ಒಂದು ಒಳ್ಳೆಯ ಕೊಠಡಿಯನ್ನು ಪಡೆದುಕೊಂಡು ತನಗೆ ಬೇಕಾದ ಉತ್ತಮ ಆಹಾರಕ್ಕೆ ಆದೇಶಕೊಟ್ಟು ತರಿಸಿಕೊಂಡ. ಏಕೆಂದರೆ ಈಗ ಅವನೊಬ್ಬ ಶ್ರೀಮಂತ ವ್ಯಕ್ತಿಯಾಗಿದ್ದ. ಅವನಲ್ಲಿ ವಿಪುಲವಾದ ಸಂಪತ್ತಿತ್ತು. ನಂತರ ಅವನು ಪೇಟೆಗೆ ಹೋದ. ತನಗೆ ಬೇಕಾದ ಉತ್ತಮ ಉಡುಪುಗಳನ್ನು ಕೊಂಡುಕೊಂಡ, ಕಾಲಿಗೆ ಉತ್ತಮ ಬೂಟುಗಳನ್ನು, ಚಪ್ಪಲಿಗಳನ್ನು ಕೊಂಡುಕೊಂಡ ಪ್ರತಿನಿತ್ಯ ಒಳ್ಳೊಳ್ಳೆ ಪೋಷಾಕುಗಳನ್ನು ಧರಿಸಿಕೊಂಡು ನಗರದಲ್ಲಿ ಸುತ್ತುತ್ತಿರುವ ಸೈನಿಕನಿಗೆ ಜನರು ಗುರುತಿಸಲು ಪ್ರಾರಂಭಿಸಿದರು. ಅವನಿಗೆ ಆ ಊರಿನ ವಿಶೇಷತೆಯ ಬಗ್ಗೆ ವಿವರಿಸಲು ಆರಂಭಿಸಿದರು. ಆ